## ಸುದ್ದಿ ಸಂಚಯ

# ರಾಮಕೃಷ್ಣ ಮಹಾಸಂಘದ ಫೆಬ್ರವರಿ–ಮಾರ್ಚ್ ತಿಂಗಳ ಚಟುವಟಿಕೆಗಳು

**ಶ್ರೀರಾಮಕೃಷ್ಣ ಜಯಂತಿ:** ಮಾರ್ಚ್ ೮ರ ಶುಕ್ರವಾರದಂದು ಶ್ರೀರಾಮಕೃಷ್ಣರ ಜಯಂತಿಯನ್ನು ಬೇಲೂರು ಮಠ ಹಾಗೂ ಇತರ ಶಾಖಾ ಕೇಂದ್ರಗಳಲ್ಲಿ ಆಚರಿಸಲಾಯಿತು. ಬೇಲೂರು ಮಠದಲ್ಲಿ ಜಯಂತಿಯ ಅಂಗವಾಗಿ ಸಾರ್ವಜನಿಕ ಸಭೆ ನಡೆಯಿತು. ಸುಮಾರು ೩೫,೦೦೦ ಮಂದಿ ಭಕ್ತರು ಪ್ರಸಾದ ಭೋಜನ ಸ್ವೀಕರಿಸಿದರು. ೧೩, ೧೪ರಂದು **ಭಕ್ತಸಮ್ಮೇಳನ** ನಡೆಯಿತು. ೭ರಂದು 'ಸಾರ್ವಜನಿಕ ಉತ್ಸವ' ನಡೆಯಿತು. ವಿವಿಧ ಕೇಂದ್ರಗಳಲ್ಲಿ ಜಯಂತಿಯ ಅಂಗವಾಗಿ ವಾರ್ಷಿಕೋತ್ಸವ ಕಾರ್ಯಕ್ರಮಗಳು ನಡೆದವು.

### ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದ ೧೨೫ನೇ ವಾರ್ಷಿಕೋತ್ಸವ:

**ಬಾರಾನಗರ ಮಠ**ದಲ್ಲಿ ಹಾಗೂ ಹತ್ತಿರದ ಶಾಲೆಯಲ್ಲಿ ೧೫ರಿಂದ ೨೯ರ ವರೆಗೆ ನಡೆದ ಭಾಷಣ ಕಾರ್ಯಕ್ರಮದಲ್ಲಿ ೨೬೪ ಮಂದಿ ವಿದ್ಯಾರ್ಥಿಗಳು, ೩೦ ಮಂದಿ ಅಧ್ಯಾಪಕರು ಭಾಗವಹಿಸಿದ್ದರು. **ಕೊಯಮತ್ತೂರು ಮಿಷನ್ ವಿದ್ಯಾಲಯ**ವು ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳನ್ನು ನಡೆಸಿತು. ಫೆಬ್ರವರಿ ೨೬, ೨೭, ಮಾರ್ಚ್ ೬ರಂದು ನಡೆದ ಈ ಸ್ಪರ್ಧೆಗಳಲ್ಲಿ ೫೦೭ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ಹಾತಮುನಿಗುಡ** (ಒರಿಸ್ಸಾ) ಆಶ್ರಮದಲ್ಲಿ ನಡೆದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ೧೪೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಫೆಬ್ರವರಿ ೨೬–೨೭ ರಂದು ನಡೆದ ಎರಡು ಯುವ ಸಮ್ಮೇಳನಗಳಲ್ಲಿ ೩೫೦ ಯುವಕರು ಭಾಗವಹಿಸಿದ್ದರು. **ಹೈದರಾಬಾದ್** ಆಶ್ರಮವು ತೆಲಂಗಾಣದ ಸೂರ್ಯಪೇಟೆ, ಕೊತಾಗುಡೇಂ, ಮಹಬೂಬ್‌ನಗರ ಹಾಗೂ ನಿರ್ಮಲ ಜಿಲ್ಲೆಗಳಲ್ಲಿ ಫೆಬ್ರವರಿ ೨೬ರಂದು ಹಾಗೂ ಮಾರ್ಚ್ ೧, ೧೧, ೨೪ರಂದು ನಡೆಸಿದ ಯುವಸಮ್ಮೇಳನದಲ್ಲಿ ೩೦೦೦ ಯುವಕರು ಭಾಗವಹಿಸಿದ್ದರು.



ರಾಜ್‌ಕೋಟ್ ಆಶ್ರಮ

**ಮಾಲ್ಡಾ** ಆಶ್ರಮವು ಮಾರ್ಚ್ ೧೦ರಂದು ನಡೆಸಿದ ಯುವಸಮ್ಮೇಳನದಲ್ಲಿ ೮ ಕಾಲೇಜುಗಳಿಂದ ಬಂದ ೪೭೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. **ಮಂಗಳೂರು** ಆಶ್ರಮವು ಮಾರ್ಚ್ ತಿಂಗಳಲ್ಲಿ ೧೪ ಕಾಲೇಜುಗಳಲ್ಲಿ ನಡೆಸಿದ ಭಾಷಣ ಕಾರ್ಯಕ್ರಮಗಳಲ್ಲಿ ೨೭೫೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ಮೈಸೂರು** ಆಶ್ರಮವು ಮಾರ್ಚ್ ೧ರಿಂದ ೧೫ರ ವರೆಗೆ ನಡೆಸಿ ಐದು ವಿಚಾರ ಸಂಕಿರಣದಲ್ಲಿ ೯ ಕಾಲೇಜುಗಳ ೧೦೪೪ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ನೌರಾ** ಆಶ್ರಮವು ಮಾರ್ಚ್ ೩೦ರಂದು ಏರ್ಪಡಿಸಿದ್ದ ಭಾಷಣ ಕಾರ್ಯಕ್ರಮದಲ್ಲಿ ೧೨೦೦ ಮಂದಿ ಭಾಗವಹಿಸಿದ್ದರು. **ಪುಣೆ** ಆಶ್ರಮವು ಮಹಾರಾಷ್ಟ್ರದ ನಾಸಿಕ್ ಹಾಗೂ ಅಮರಾವತಿ ಜಿಲ್ಲೆಗಳ ೫ ಕಾಲೇಜುಗಳಲ್ಲಿ ಫೆಬ್ರವರಿ–ಮಾರ್ಚ್ ತಿಂಗಳಲ್ಲಿ ನಡೆಸಿದ ಬುಡಕಟ್ಟು ಯುವ ಸಮ್ಮೇಳನದಲ್ಲಿ ೧೦೭೭ ಮಂದಿ ಯುವಕರು ಭಾಗವಹಿಸಿದ್ದರು. **ಶ್ರೀನಗರ** ಆಶ್ರಮವು ಮಾರ್ಚ್ ೨೪ರಂದು ಬಾರಾಮುಲ್ಲಾ ಜಿಲ್ಲೆಯ ಹೆಣ್ಣುಮಕ್ಕಳ ಅನಾಥಾಲಯದಲ್ಲಿ ನಡೆಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ೬೦ ಮಂದಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. **ವಡೋದರ** ಆಶ್ರಮವು ನವೆಂಬರ್‌ನಿಂದ ಜನವರಿ ತನಕ ನಡೆಸಿದ ಪ್ರಬಂಧ ಸ್ಪರ್ಧೆಯಲ್ಲಿ ೨೧೩ ಶಾಲೆಯ ೧೧೫೯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮಾರ್ಚ್ ತಿಂಗಳಲ್ಲಿ ಬಹುಮಾನ ವಿತರಣೆ ನಡೆಯಿತು. **ವಿಜಯವಾಡ** ಆಶ್ರಮವು ಮಾರ್ಚ್ ೨೦ರಂದು ನಡೆಸಿದ ವಿಶೇಷ ಪ್ರೇರಕ ಭಾಷಣದಲ್ಲಿ ೬೭೦ ವಿದ್ಯಾರ್ಥಿಗಳು ಹಾಗೂ ೬೦ ಮಂದಿ ಅಧ್ಯಾಪಕರು ಭಾಗವಹಿಸಿದ್ದರು.

### ಶಾಖಾ ಕೇಂದ್ರಗಳಲ್ಲಿ ನಡೆದ ಚಟುವಟಿಕೆಗಳು

**ಲಕ್ನೋ** ಸೇವಾಶ್ರಮದ ವಿವೇಕಾನಂದ ಪಾಲಿಕ್ಲಿನಿಕ್ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ಸುವರ್ಣ ಮಹೋತ್ಸವದ ವರ್ಷಾಚರಣೆಯ ಉದ್ಘಾಟನೆಯು ಫೆಬ್ರವರಿ ೧೮ರಂದು ಜರುಗಿತು. **ರಾಜ್‌ಕೋಟ್** ಆಶ್ರಮವು ಫೆಬ್ರವರಿ ೨೪ರಂದು ಸ್ವಾಮಿ ವಿವೇಕಾನಂದರ ಗುಜರಾತ್ ಭೇಟಿಯ ೧೨೫ ನೇ ವಾರ್ಷಿಕೋತ್ಸವದ ಅಂಗವಾಗಿ ಒಂದು ಸ್ಮರಣಸಂಚಿಕೆಯನ್ನು ಹೊರತಂದಿದೆ. **ಚೆನ್ನೈ** ರಾಮಕೃಷ್ಣ ಮಠವು ಮಾರ್ಚ್ ೧೭, ೧೮ ರಂದು ಚೆನ್ನೈ ಕಪಾಲೀಶ್ವರ ದೇವಾಲಯದ ರಥಯಾತ್ರೆಯ ಸಂದರ್ಭದಲ್ಲಿ ಸುಮಾರು ೨೦,೦೦೦ ಮಂದಿ ಭಕ್ತರಿಗೆ ಮಜ್ಜಿಗೆ ಪಾನೀಯವನ್ನು ವಿತರಣೆ ಮಾಡಿತು. NAAC ಸಂಸ್ಥೆಯು ಬೇಲೂರು ಮಠದ RKMVERI (ಖಾಸಗಿ ವಿ.ವಿ.)ಗೆ ಅತಿ ಹೆಚ್ಚಿನ ಗ್ರೇಡ್ A++ ನೀಡಿದೆ.

### ಮೌಲ್ಯ ಶಿಕ್ಷಣ ಕಾರ್ಯಕ್ರಮಗಳು ಹಾಗೂ ಯುವ ಸಮ್ಮೇಳನಗಳು

**ಬಾರಾನಗರ** ಮಿಷನ್ ಆಶ್ರಮವು ಕೊಲ್ಕತ್ತದ ೪ ಕಾಲೇಜುಗಳಲ್ಲಿ ಮಾರ್ಚ್ ೨೭ರಿಂದ ೨೯ರ ವರೆಗೆ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಿತು. ಇದರಲ್ಲಿ ೩೦೪ ವಿದ್ಯಾರ್ಥಿಗಳು ಹಾಗೂ ೧೧೮ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. **ದೆಹಲಿ** ಆಶ್ರಮವು ಫೆಬ್ರವರಿ ೨ ರಂದು ನಡೆಸಿದ ವಿದ್ಯಾರ್ಥಿ ಸಮ್ಮೇಳನದಲ್ಲಿ ಹಲವು ಶಾಲೆಗಳಿಂದ ಬಂದ ೮೨೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದಲ್ಲದೆ, ದೆಹಲಿ, ಎರ್ನಾಕುಲಂ, ಚಂಡೀಗಢ, ಗುಡಗಾಂ, ವಿಶಾಖ ಪಟ್ಟಣ ಮುಂತಾದ ಕಡೆ ಫೆಬ್ರವರಿ ೧೬ ಇಂದ ಮಾರ್ಚ್ ೮ರ ವರೆಗೆ ನಡೆಸಿದ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳಲ್ಲಿ ೬೭೬ ಅಧ್ಯಾಪಕರು ಹಾಗೂ ಪ್ರಿನ್ಸಿಪಾಲರು, ೧೮೯ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದಲ್ಲದೆ ಆಶ್ರಮವು ಹರಿಯಾಣ, ಮಧ್ಯಪ್ರದೇಶ, ರಾಜಸ್ಥಾನಗಳ ಸರಕಾರಿ ಶಾಲೆಗಳಿಗೆ ೧೧೦ LED ಪ್ರೊಜೆಕ್ಟರ್‌ಗಳನ್ನು ಕೂಡ ವಿತರಿಸಿತು. **ಗುರಪ್** ಆಶ್ರಮವು ಮಾರ್ಚ್ ೧೫ರಂದು ನಡೆಸಿದ ಮೌಲ್ಯ ಶಿಕ್ಷಣ ವಿಚಾರ ಸಂಕಿರಣಗಳಲ್ಲಿ ೨೮೧೪ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು. **ರಾಜ್‌ಕೋಟ್** ಆಶ್ರ ಮವು ಮಾರ್ಚ್ ೧೫ರಿಂದ ೧೮ರ ತನಕ ನಡೆಸಿದ ಎರಡು ಮೌಲ್ಯ ಶಿಕ್ಷಣ ಕಾರ್ಯಕ್ರಮಗಳಲ್ಲಿ ೧೬೦ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ವಡೋದರ** ಕೇಂದ್ರವು ಜನವರಿಯಿಂದ ಮಾರ್ಚ್ ತನಕ ಗುಜರಾತಿನ ೪ ಜಿಲ್ಲೆಗಳಲ್ಲಿನ ೨೧ ಶಾಲೆಗಳಲ್ಲಿ ನಡೆಸಿದ ಮೌಲ್ಯಶಿಕ್ಷಣ ಕಾರ್ಯಕ್ರಮಗಳಲ್ಲಿ ಒಟ್ಟು ೧೭೦ ವಿದ್ಯಾರ್ಥಿಗಳು ಭಾಗವಹಿಸಿದ್ದರು.




ಶ್ರೀನಗರ ಆಶ್ರಮ



ವಿಜಯವಾಡ ಆಶ್ರಮ



Managing Editor : Swami Atmajnananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020